ನೂಕಿಕೊಂಡು ದಿವಾಕರ ಪ್ರತ್ಯಕ್ಷವಾಗಿದ್ದ. 'ಏನ್ ಮಾರಾಯರೆ ಇಷ್ಟೊಂದು ಥಂಡಿ. ನಂಗೇನೋ ಇವತ್ತು ಬ್ಯಾಂಕ್‌ಗೆ ಹೋಗಾಕೆ ಮನಸ್ಸಿಲ್ಲ. ಲೀವ್ ಹಾಕ್ಬಿಡ್ತೀನಿ' ಎಂದವನು ಮೂರ್‍ನಾಲ್ಕು ಚಪಾತಿಗಳನ್ನು ಹೊಡೆದ. 'ಫಸ್ಟ್ ಕ್ಲಾಸ್ ಮಾಡಿದ್ದೀರಿ ಅತ್ತಿಗೆ. ಚಳಿಗಾಲಕ್ಕೆ ಒಳ್ಳೆ ತಿಂಡಿ. ಸಾಗು ತುಂಬಾ ಖಾರವಾಗಿದೆ... ಈ ಸೀತಕ್ಕೆ ಸರಿಯಾಗಿ' ಅವನ ಮಾಮೂಲಿನ ಪ್ರಶಂಸೆಯ ಮಾತುಗಳು ನನ್ನವಳಿಗೆ ರೂಢಿಯಾಗಿ ಹೋಗಿದ್ದವು.

ತಿಂಡಿ ತಿಂದು ನಾನು ಆಫೀಸಿಗೆ ಹೊರಟಾಗ ಅವನು ಮನೆಯ ಕಡೆಗೆ ನಡೆದ. 'ಬರ್ತೀರ ಸ್ವಲ್ಪ ವಿಸ್ಕಿ ಹೊಡೆಯೋಣ... ಬೆಚ್ಚಗೆ ಆಫೀಸಿಗೆ ಹೋಗಬಹುದು' ಎಂದವನಿಗೆ, 'ಈಗ ಬೇಡ ಸಂಜೆಗೆ ಬರುತ್ತೇನೆ... ಜೊತೆಗೆ ಕಾರ ತರುತ್ತೇನೆ' ಎಂದು ಹೇಳಿ ಹೊರಟಿದ್ದೆ.

ಅಂದೆಲ್ಲ ಆಫೀಸಿನಲ್ಲಿ ಕೆಲಸ ಮಾಡಲು ಮನಸ್ಸಿರಲಿಲ್ಲ. ನಾನೂ ಕೂಡ ರಜ ಬರೆದು ದಿವಾಕರನೊಂದಿಗೆ ವಿಸ್ಕಿ ಹೊಡೆದು ಆರಾಮವಾಗಿ ಕಾರ್ಡ್ ಆಡುತ್ತಾ ಕಾಲಕಳೆದಿದ್ದರೆ ಈ ಥಂಡಿಯ ಅರಿವೇ ಆಗುತ್ತಿರಲಿಲ್ಲ ಅನ್ನಿಸಿತು. ಇನ್ನೂ ಒಂದು ಗಂಟೆ ಮುಂಚಿತವಾಗಿಯೇ ಆಫೀಸು ಬಿಟ್ಟು ದೇಸಾಯರ ಹೋಟೆಲಿನಲ್ಲಿ ಬಿಸಿ ಬಿಸಿ ವಡೆ ಮತ್ತು ಪಕೋಡ ಕಟ್ಟಿಸಿಕೊಂಡು ಮನೆಯ ಕಡೆ ಹೊರಟೆ. ನನ್ನ ಮನೆಯ ಪಕ್ಕದಲ್ಲೆ ದಿವಾಕರನ ಮನೆ. ಸೀದಾ ದಿವಾಕರನ ಮನೆಗೆ ಹೋದೆ. ದಿವಾಕರ ಇನ್ನೂ ಮಲಗಿದ್ದ. ಬಾಗಿಲಿಗೆ ಚಿಲುಕ ಹಾಕಿರಲಿಲ್ಲ. ಬಾಗಿಲು ತಳ್ಳಿಕೊಂಡು ಒಳಗೆ ಹೋದಾಗ ಅವನಿನ್ನೂ ಮಲಗಿದ್ದ. ಗುಂಡು ಸುಮಾರಾಗಿ ಹಾಕಿರುವನೆಂದುಕೊಂಡು ಹೋಗಿ ಅಲುಗಿಸಿದೆ. ಮನುಷ್ಯ ಮಿಸುಕಾಡಲಿಲ್ಲ. ಜೋರಾಗಿ ಅಲುಗಿಸಿದೆ. ಇಲ್ಲಾ ದಿವಾಕರ ಅಲುಗಾಡಲಿಲ್ಲ! ಭಯವಾಯಿತು... ಆ ಭಯದೊಂದಿಗೇ ಅವನ ದಿಂಬಿನ ಪಕ್ಕದಲ್ಲಿದ್ದ ನಿದ್ರೆಗುಳಿಗೆಯ ಸೀಶೆ! ಇಂತಹ ಅನಿರೀಕ್ಷಿತ ಸಾವಿಗೆ ದಿವಾಕರ ಬಲಿಯಾಗುತ್ತಾನೆಂದು ನಾನಂದುಕೊಂಡಿರಲಿಲ್ಲ. ಅಂದು ನಾನೂ ಕೂಡ ರಜ ಹಾಕಿ ದಿವಾಕರನೊಂದಿಗಿದ್ದಿದ್ದರೆ ಅವನು ಖಂಡಿತವಾಗಿಯೂ ಸಾಯುತ್ತಿರಲಿಲ್ಲವೆಂದೆನಿಸಿ ಖೇದವಾದರೂ, ಹೀಗಾಗುತ್ತದೆಂದು ನನಗೆ ಗೊತ್ತಿತ್ತೆ?

ಅವನು ಅನಿರೀಕ್ಷಿತವಾಗಿ ಸತ್ತಂತೆ. ಅವನ ಗೆಳೆತನವಾದದ್ದು ಅನಿರೀಕ್ಷಿತವೇನೂ ಅಲ್ಲ. ಬೆಂಗಳೂರಿನಿಂದ ವರ್ಗವಾಗಿ ಅಲ್ಲಿ ಹೊಸ ಮನೆ ಹಿಡಿದಾಗ, ನಮ್ಮ ಮನೆಯ ಪಕ್ಕದ ಮನೆಯಲ್ಲಿ ಈ ದಿವಾಕರ ವಾಸವಾಗಿದ್ದ. ಚಿಕ್ಕ ಮನೆಯಾದರೂ ಸ್ವಂತದ್ದು. ಒಬ್ಬರಿರುವುದಕ್ಕೆ ಸ್ವಲ್ಪ ದೊಡ್ಡದಾದ ಮನೆಯೇ. ವಯಸ್ಸು ಮೂವತ್‌ಐದು ಮೀರಿದ್ದರೂ ಅವನಿನ್ನೂ ಒಂಟಿಯಾಗಿಯೇ ಇದ್ದ. ನಾವು ಹೊಸದಾಗಿ ಹೋದಾಗ ಅವನು ಪತ್ರಿಕೆಗಳಿಗಾಗಿ ಬರುತ್ತಿದ್ದ. ನಂತರ ಹೀಗೇ ಬೆಳೆಯಿತು. ನನ್ನ ತಾಯಿಯ ಹತ್ತಿರ ಸಂಕೋಚ ಇಲ್ಲದೆ ಮಾತನಾಡುತ್ತಿದ್ದ. ನಂತರ ವಿಸ್ಕಿ, ಇಸ್ಪೀಟು ಗೆಳೆತನವಾದ ಮೇಲೆ ಇಬ್ಬರೂ ಸಾಕಷ್ಟು ಆತ್ಮೀಯರಾಗತೊಡಗಿದೆವು. ಆಗಾಗ ಊಟಕ್ಕೆ ಆಹ್ವಾನಿಸುತ್ತಿದ್ದೆ. 'ಇದೇನ್ರಿ ಮಾರಾಯರೆ– ಇಷ್ಟು ವರ್ಷ ಆದ್ರೂ ಮಾಡ್ಕೊಳ್ಳೆ' ಎಂದು ಅಮ್ಮ ಎಗ್ಗಿಲ್ಲದೆ ಕೇಳಿದ್ದಳು. ನಾನೂ ಆ ಬಗ್ಗೆ ಬಲವಂತಪಡಿಸಿದ್ದೆ. 'ಇರಲಿ, ಸರಿಯಾದ ಮೇಟ್ ಸಿಕ್ಕಲಿ – ಆಗುತ್ತೇನೆ' ಎಂದು ಮಾತು ತೇಲಿಸುತ್ತಿದ್ದ. ಹೀಗೆ ಎರಡು ವರುಷ ನಮ್ಮ ಗೆಳೆತನ ಮುಂದುವರೆಯಿತು. ಆ ಎರಡು ವರುಷಗಳಲ್ಲಿ ಎಂದೂ ಅವನ ಮುಖದಲ್ಲಿ ಅಸಮಾಧಾನದ, ನಿರುತ್ಸಾಹದ ಗೆರೆಗಳನ್ನು ನಾನು ಗುರ್ತಿಸಿರಲಿಲ್ಲ. ಅವನಿಗೆ ಹೆಚ್ಚು ಸ್ನೇಹಿತರೂ ಇರಲಿಲ್ಲ. ಅವನ ಬ್ಯಾಂಕಿನ ಸಹೋದ್ಯೋಗಿಗಳು ಆಗಾಗ ಬರುತ್ತಿದ್ದರು. ತಂದೆತಾಯಿ ಯಾರೂ ಇಲ್ಲವೆಂದು ಹೇಳಿದ್ದ. ಹದಿನೈದು ದಿವಸಗಳಿಗೊಮ್ಮೆ ತಿಂಗಳಿಗೊಮ್ಮೆ